# ಹೊಸ ಪ್ರಯೋಗ ಹೊಸ ಟ್ರೆಂಡ್

ಅಡುಗೆಮನೆಯನ್ನು ಪ್ರತ್ಯೇಕ ಯುನಿಟ್ ಎಂದು ಭಾವಿಸುವ ಕಾಲ ಈಗಿಲ್ಲ. ಅದು ಮನೆಯ ಹಜಾರದ್ದೇ ಒಂದು ಭಾಗ ಎನ್ನುವಂತೆ ಒಳಾಂಗಣ ವಿನ್ಯಾಸದಲ್ಲಿ ಮರುರೂಪಿಸುವ ಹೊಸ ಟ್ರೆಂಡ್ ಈಗ ಬಲವಾಗಿದೆ. ಅಡುಗೆ ಮನೆಯಲ್ಲಿ ಬಳಸುವ ಪೀಠೋಪಕರಣಗಳು ಅತ್ಯಂತ ನಾಜೂಕನ್ನು ಮತ್ತು ಹೊಸ ಬಣ್ಣ ಮತ್ತು ಸ್ವರೂಪವನ್ನು ಪ್ರತಿಬಿಂಬಿಸುವ ಹಿನ್ನೆಲೆಯಲ್ಲಿ ಹಳೆಯ ಸಾಂಪ್ರದಾಯಕ ಅಡುಗೆಕೋಣೆಯ ಸ್ವರೂಪವೂ ಬದಲಾಗಿದೆ.

ಇತ್ತೀಚೆಗೆ ಒಳಾಂಗಣ ವಿನ್ಯಾಸ ಕ್ಷೇತ್ರದಲ್ಲಿ ಅಡುಗೆ ಮನೆಯ ವಿನ್ಯಾಸ ಹೆಚ್ಚು ಮಹತ್ವ ಪಡೆದುಕೊಳ್ಳುತ್ತಿದ್ದು ಟ್ರೆಂಡ್ ಅತ್ಯಂತ ವೇಗವಾಗಿ ಬದಲಾಗುತ್ತಿದೆ. ಹಜಾರದ ಅಥವಾ ಹಾಲ್‌ನ ಒಂದು ಗೋಡೆಯಷ್ಟೇ ಅಡುಗೆ ಮನೆಯಾಗಿ ರೂಪುಗೊಂಡು, ಅಲ್ಲಿನ ಕೆಲಸ ಮುಗಿದ ತಕ್ಷಣ ಅದೂ ಹಾಲ್‌ನ ಒಂದು ಭಾಗವಾಗುವುದು ಹೊಸ ಟ್ರೆಂಡ್‌ಗಳಲ್ಲಿ ಮುಖ್ಯವಾದದ್ದು. ಮುಖ್ಯವಾಗಿ ಈ ಅಡುಗೆ ಭಾಗಕ್ಕೆ ಬಳಸುವ ಗೋಡೆಗಳ ಬಣ್ಣಗಳು ಹಾಲ್‌ನ ಬಣ್ಣಗಳ ಜತೆಗೆ ತಾದಾತ್ಮ್ಯ ಹೊಂದುವುದರಿಂದ ಇಡೀ ಹಾಲ್‌ಗೇ ಒಂದು ವಿಶಾಲತೆಯ ವಿಶಿಷ್ಟ ರೂಪ ಬರುತ್ತದೆ. ಲಿವಿಂಗ್ ಸ್ಪೇಸ್ ಮತ್ತು ಅಡುಗೆ ಮನೆ ಎರಡೂ ಬೇರೆ ಬೇರೆ ಎಂದು ಪರಿಗಣಿಸದಂತೆ ಹೊಸ ವಿನ್ಯಾಸಗಳು ರೂಪುಗೊಳ್ಳುತ್ತಿವೆ.

ಸರಳ ವಿನ್ಯಾಸ ಮತ್ತು ಎಲ್ಲವೂ ಗೋಡೆಯೊಳಗೆ ಹುದುಗಿದಂತೆ ಕಾಣಿಸುವ ಕ್ಯಾಬಿನೆಟ್‌ಗಳಿಂದಾಗಿ ಅಡುಗೆ ಕೋಣೆಯಲ್ಲಿ ಹೆಚ್ಚು ಸ್ಥಳಾವಕಾಶವೂ ಸಿಗುತ್ತಿದೆ. ಇದಕ್ಕೆ ಪೂರಕವಾಗಿ ಕಂಪೆನಿಗಳು ಆಯಾ ಮನೆಯ ಅಡುಗೆ ಆವರಣವನ್ನು ಮೊದಲೇ ಪರಿಶೀಲಿಸಿ ಆಯಾ ಮನೆಯ ಅಗತ್ಯಕ್ಕೆ ತಕ್ಕಂತೆ ಕ್ಯಾಬಿನೆಟ್‌ಗಳನ್ನು ರೂಪಿಸುವುದಕ್ಕೆ ಒತ್ತು ಕೊಡಲಾಗುತ್ತಿದೆ.

ತಂತ್ರಜ್ಞಾನ ಎಷ್ಟು ಮುಂದುವರಿದಿದೆಯೆಂದರೆ ಅಡುಗೆ ಮನೆಯ ಸ್ಮಾರ್ಟ್ ಪರಿಕರಗಳು ವಿನ್ಯಾಸದ ಅವಿಭಾಜ್ಯ ಭಾಗವೇ ಆಗುವಂತಿದೆ. ಈ ಸ್ಮಾರ್ಟ್ ಉಪಕರಣಗಳು ಎಲ್ಲಿ ಅಡಗಿ ಕುಳಿತಿರುತ್ತವೆ ಎನ್ನುವುದೇ ಗೊತ್ತಾಗುವುದಿಲ್ಲ. ಸ್ಟೀಮ್ ಓವನ್, ಕಾಫಿ ಮೆಶಿನ್ ಮತ್ತು ವೈನ್ ಕೂಲರ್‌ಗಳೂ ಅಡುಗೆ ಮನೆಯ ವಿನ್ಯಾಸದ ಭಾಗವೇ ಆಗಿ ಅಡಗಿಕುಳಿತುಕೊಳ್ಳುವಂತೆ ರೂಪಿಸಲಾಗುತ್ತಿದೆ. ಊಟ ಮಾಡಲು ಕುಳಿತುಕೊಳ್ಳುವ ಸ್ಟೂಲ್‌ಗಳೂ ಅಲ್ಲಲ್ಲೇ ಮರೆಯಾಗುವಂತೆ, ಅಗತ್ಯ ಬಿದ್ದಾಗ ಮಾತ್ರ ಹೊರಬರುವಂತೆ ಮರುರೂಪಿಸಲಾಗುತ್ತಿದೆ.

ಜತೆಗೆ ಅಡುಗೆ ಮನೆಗೆ ಸಾಂಪ್ರದಾಯಕ ಲುಕ್ ಕೊಡುವ ಯತ್ನಗಳೂ ಶುರುವಾಗಿವೆ. ಹೇಗೆ ಹಾಲ್ ನ ಮೇಲ್ಭಾಗವನ್ನು ಅಲಂಕರಿಸುತ್ತೇವೆಯೋ ಅದೇ ರೀತಿ ಅಡುಗೆ ಮನೆಯ ಗೋಡೆಗಳಲ್ಲಿ ಮತ್ತು ಮೇಲ್ಭಾಗಗಳಲ್ಲಿ ಕಲಾತ್ಮಕ ಕುಸುರಿಯನ್ನು ರೂಪಿಸುವುದೂ ಈಗ ಒಂದು ಟ್ರೆಂಡ್ ಆಗುತ್ತಿದೆ. ಇನ್ನೊಂದೆಡೆ ಪ್ಲಾಸ್ಟಿಕ್ ಕಣ್ಮರೆಯಾಗಿ, ಮರದ ಉಪಕರಣಗಳು ಬರತೊಡಗಿವೆ. ಹಳೆಯ ಕಾಲದ ಅಡುಗೆ ಉಪಕರಣಗಳನ್ನು ಹೊಸ ರೂಪದಲ್ಲಿ ಕೂಡಿಸುವ ಪ್ರಯತ್ನಗಳು ಆಗುತ್ತಿವೆ. ಕಳೆದ ವರ್ಷ ಮೆಟಾಲಿಕ್ ಫಿನಿಶಿಂಗ್ ಅತಿದೊಡ್ಡ ಟ್ರೆಂಡ್ ಆಗಿ ಕಾಣಿಸಿಕೊಂಡಿತು. ತಾಮ್ರ, ಕಂಚು, ಹಿತ್ತಾಳೆಗಳ ಕಲಾತ್ಮಕ ಪಾತ್ರೆಗಳು ಅಡುಗೆ ಮನೆಯ ಸೌಂದರ್ಯವನ್ನು ಇಮ್ಮಡಿಸಿದವು. ಜತೆಗೆ ಗೋಡೆಗಳಲ್ಲಿ ವಿವಿಧ ವಿನ್ಯಾಸಗಳನ್ನು ಬಣ್ಣದಲ್ಲಿ ಮೂಡಿಸಿ, ಅದಕ್ಕೆ ತಕ್ಕಂತೆ ಕ್ಯಾಬಿನ್‌ಗಳನ್ನು ಕೂಡಿಸುವ ಕೆಲಸಕ್ಕೆ ಒತ್ತು ಕೊಡಲಾಗಿತ್ತು. ಈಗ ಮರ ಮತ್ತು ಲೋಹಗಳ ನಡುವೆ ಇನ್ನೊಂದು ರೀತಿಯ ಸಂಯೋಜನೆಯನ್ನು ರೂಪಿಸುವತ್ತ ವಿನ್ಯಾಸಕಾರರ ಚಿತ್ತ ಹರಿದಿದೆ.

ಬೆಳಕಿನ ವಿನ್ಯಾಸ ಕೂಡಾ ಇತ್ತೀಚೆಗೆ ಮಹತ್ವ ಪಡೆದುಕೊಳ್ಳುತ್ತಿದೆ. ಸಾಂಪ್ರದಾಯಕ ಬೆಳಕಿನ ಪರಿಕಲ್ಪನೆ ಮರೆಯಾಗಿದ್ದು ಯಾವ ಕ್ಯಾಬಿನ್ ತೆರೆದುಕೊಂಡಾಗ ಎಲ್ಲಿ ಎಷ್ಟು ಬೆಳಕು ಬೀಳಬೇಕು ಎನ್ನುವುದನ್ನು 'ಇನ್‌ಬಿಲ್ಟ್' ಆಗಿ ರೂಪಿಸುವ ಎಲ್‌ಇಡಿ ತಂತ್ರಜ್ಞಾನವೂ ಜನಪ್ರಿಯವಾಗುತ್ತಿದೆ. ಕ್ಯಾಬಿನೆಟ್‌ನ ಮೇಲೆ, ಕೆಳಗೆ ಮತ್ತು ಒಳಭಾಗಗಳಲ್ಲಿ ಲೋ ವೋಲ್ಟೇಜ್ ಲೈಟ್ ಟೇಪ್‌ಗಳನ್ನು ಬಳಸುವುದು ಪರಿಸರ ಸ್ನೇಹಿ ಮಾತ್ರವಲ್ಲ, ವಿದ್ಯುತ್ ಅಪಬಳಕೆಯನ್ನೂ ನಿಯಂತ್ರಿಸುತ್ತದೆ. ಬೆಳಕು ಬಣ್ಣದ ಮೇಲೆ ಬಿದ್ದಾಗ ವಿಶಿಷ್ಟ ಮೂಡ್ ಸೃಷ್ಟಿಸುವುದಕ್ಕೆ ಪೂರಕವಾಗುವಂತೆಯೇ ಕ್ಯಾಬಿನೆಟ್‌ಗಳ ಬಣ್ಣಗಳನ್ನು ರೂಪಿಸಲಾಗುತ್ತಿದೆ.



ವಾಲ್‌ಕುಚಿನೆ ಅಡುಗೆಮನೆ

ಸೌಟು, ಚಾಕು, ಚಮಚ, ಫೋರ್ಕ್ ಮತ್ತಿತರ ಸಲಕರಣೆಗಳ ಕಿಟ್‌ನ ಕೇಸ್ ಕೂಡ ಅದರೊಳಗಿತ್ತು. ಪಕ್ಕದ ಡ್ರಾಯರ್‌ನಲ್ಲಿ ಡಿಷ್ ಕ್ಲೀನರ್ ಇತ್ತು. ಈ ಸಾಧನ ಸ್ವಲ್ಪೇ ನೀರಿನಲ್ಲಿ ಜಿಡ್ಡಿನ ಪಾತ್ರೆಗಳನ್ನೂ ಫಳಫಳ ಹೊಳೆಯುವಂತೆ ಮಾಡುತ್ತದಂತೆ. ಮತ್ತೊಂದು ಡ್ರಾಯರ್‌ನಲ್ಲಿ ಪುಟ್ಟ ತ್ಯಾಜ್ಯ ವಿಂಗಡಣಾ ಘಟಕ. ಹಸಿ ಕಸ, ಒಣ ಕಸ ಹಾಗೂ ಇತರ ತ್ಯಾಜ್ಯಕ್ಕೆ ಒಂದೊಂದು ಕಂಟೇನರ್‌ಗಳು ಅಲ್ಲಿದ್ದವು.

'ಎಲ್ಲಾ ಸರಿ, ಅಡುಗೆ ಎಲ್ಲಿ ಮಾಡುವುದು..' ಎಂಬ ಗೊಂದಲ. 'ರೈಸ್' ಸಂಸ್ಥೆಯ ಮಾರುಕಟ್ಟೆ ನಿರ್ದೇಶಕಿ ನಿವೇದಿತಾ ರೆಡ್ಡಿ, ಟೇಬಲ್ ಮೇಲಿನ ಹಲಗೆಯೊಂದನ್ನು ಸರ್ರನೆ ಸರಿಸಿದರು. ಐದು ಒಲೆಗಳ ಸ್ಟೌವೊಂದು ಹೊರಗೆ ಬಂದಿತು. ಖಾಲಿ ಟೇಬಲ್ ಮೇಲೆ ತರಕಾರಿ ಕತ್ತರಿಸುವ ಪ್ಲೇಟ್‌ಗಳು, ಅಡುಗೆ ಮಾಡುವ ಸಾಧನಗಳು ಪ್ರತ್ಯಕ್ಷವಾಗಿ ದಿಗ್ಭ್ರಮೆ ಮೂಡಿಸಿದವು.

ರೆಫ್ರಿಜರೇಟರ್, ಮೈಕ್ರೋವೇವ್, ಕಾಫಿ ಮೆಷಿನ್, ಡಿಷ್ ವಾರ್ಮರ್, ಸ್ಟೀಮ್ ಓವನ್ ಮೊದಲಾದ ಸಾಧನಗಳು ಕಿಚನ್ ಟೇಬಲ್ ಪಕ್ಕದ ಅಂದದ ವಾರ್ಡ್‌ರೋಬ್‌ಗಳಲ್ಲಿ ದರ್ಶನ ನೀಡಿದವು. ಗ್ಲಾಸ್ ಹಾಗೂ ಅಲ್ಯುಮಿನಿಯಂ ನೆರವಿನಿಂದ ಸಿದ್ಧಪಡಿಸಿದ ಆ ವಾರ್ಡ್‌ರೋಬ್‌ಗಳ ಮೇಲೆ ಅಂದದ ಪೇಂಟಿಂಗ್ ಗಮನ ಸೆಳೆಯುತ್ತಿತ್ತು.

ಗ್ಲಾಸ್, ಪ್ಲೈವುಡ್ ಇಲ್ಲವೆ ಅಲ್ಯುಮಿನಿಯಂ ಇವುಗಳಲ್ಲಿ ಯಾವುದರ ಕಿಚನ್ ಬೇಕೆಂಬುದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಉಂಟು. ಸುತ್ತಿಗೆಯಿಂದ ಕುಟ್ಟಿದರೂ ಗ್ಲಾಸ್ ಮುರಿಯುವುದಿಲ್ಲ. ಇಟಲಿಯ ವಾಲ್‌ಕುಚಿನೆ ಸಂಸ್ಥೆ ವಿನ್ಯಾಸಗೊಳಿಸಿ ಸಿದ್ಧಪಡಿಸಿದ ಕಿಚನ್ ಇದು. 'ರೈಸ್' ಸಂಸ್ಥೆಯು ಅದರ ದಕ್ಷಿಣ ಭಾರತದ ಡೀಲರ್‌ಷಿಪ್ ಪಡೆದುಕೊಂಡಿದೆ.

## ಇಟಲಿಯ ವಿನ್ಯಾಸ

ವಾಲ್‌ಕುಚಿನೆ ಸಂಸ್ಥೆಯ ಉತ್ಪಾದನಾ ಘಟಕ ಇಟಲಿಯ ಪರ್ಡಿನೊನಾ ಎಂಬಲ್ಲಿದೆ. ನಾವು ಬಯಸಿದ ವಿನ್ಯಾಸ ಅಂತಿಮಗೊಂಡ ಮೇಲೆ 'ರೈಸ್'ನ ವಿನ್ಯಾಸಕಾರರು ಅದನ್ನು ಪರ್ಡಿನೊನಾಕ್ಕೆ ಕಳುಹಿಸುತ್ತಾರೆ. ಅಲ್ಲಿಂದ ಕಿಚನ್ ಸಿದ್ಧವಾಗಿ ಬರಲು ಮೂರು ತಿಂಗಳು ಬೇಕು. 'ಇಷ್ಟೊಂದು ಸಮಯ ಏಕೆ?' ಎಂದು ಕೇಳಿದರೆ, 'ಅತ್ಯಂತ ವಿಶಿಷ್ಟವಾದ ಕಿಚನ್ ಇದು. ಗುಣಮಟ್ಟದಲ್ಲಿ ಯಾವುದೇ ರಾಜಿ ಇಲ್ಲ. ಎಲ್ಲವೂ ಪರ್ಡಿನೊನಾ ಘಟಕದಲ್ಲೇ ಸಿದ್ಧವಾಗಬೇಕು. ಹೀಗಾಗಿ ಸಮಯ ಹಿಡಿಯುತ್ತದೆ. ಕಿಚನ್‌ನ ಪ್ರತಿ ಸಲಕರಣೆಗೂ 15 ವರ್ಷಗಳ ಗ್ಯಾರಂಟಿ ನೀಡಲಾಗುತ್ತದೆ' ಎಂದು ಹೇಳಿದರು ನಿವೇದಿತಾ.

ಈ ಕಿಚನ್ ಕ್ಯಾಬಿನೆಟ್‌ನಲ್ಲಿ ಸ್ಟೀಮ್ ಓವನ್ ಸಹ ಉಂಟು. ಕೆಲವೇ ನಿಮಿಷಗಳಲ್ಲಿ ಹಬೆಯಾಡುವ ಅನ್ನ, ಬಿಸಿ ಬಿಸಿ ಇಡ್ಲಿ ಸಿದ್ಧವಾಗುತ್ತದೆ. ಯಾರಾದರೂ ಅತಿಥಿಗಳು ಬಂದರೆ ಧಾನ್ಯ ಸಂಗ್ರಹದ ಪುಟ್ಟ ಬೆಂಚ್ ಮೇಲೆ ಕಾಲಿಲ್ಲದ ಕುರ್ಚಿ ಇಟ್ಟು ಕೂರಿಸಬಹುದು. ಕಾಫಿ ಮೆಷಿನ್‌ನಿಂದ ಘಮ್ಮೆಂದು ಪರಿಮಳ ಹರಡುವ ಕಾಫಿಯನ್ನು ಅವರ ಕೈಗೆ ಇಡಬಹುದು.